**ಸಾಕ್ಷಿಯನ್ನು ದಿನಾಂಕ 24-11-2025 ರಂದು ಕರೆಸಿ ಸತ್ಯ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ  ಟಿ ಕೆ ಎಂ  ವಕೀಲರಿಂದಃ**

1 ನೇ ಪ್ರತಿವಾದಿ ಈ ದಾವೆಯನ್ನು ಸಲ್ಲಿಸಿದ್ದಾಗಿನಿಂದಲೂ ಪ್ರತೀ ಮುದ್ದತ್ತಿನ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದರು ಎಂದರೆ ಸರಿ. ನನ್ನ ತಂದೆ ವೀರಸಿದ್ದಯ್ಯರವರು ಆರೋಗ್ಯವಾಗಿ ಇರುತ್ತಾರೆ ಎಂದರೆ ಸರಿಯಲ್ಲ. ಸುಮಾರು 2 ವರ್ಷಗಳಿಂದ ನನ್ನ ತಂದೆಗೆ ಕಣ್ಣಿನ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿರುತ್ತೇನೆ ಹಾಗೂ ಅವರು ಹಲವಾರು ವೃದ್ದಾಪ್ಯ ಕಾಯಿಲೆಗಳಿಂದ ಬಳಲುತ್ತಿರುತ್ತಾರೆ. ವಾದಿಯು ಈ ದಾವೆಯನ್ನು ಖಾತಾ ಸಂಖ್ಯೆ 444/2 ರ ವಿಸ್ತೀರ್ಣ 40 X 40 ಅಡಿಗಳಿಗೆ ಸಂಬಂಧಿಸಿದಂತೆ ಸಲ್ಲಿಸಿರುತ್ತಾರೆ. ಸದರಿ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಗಲ್ಲಿ, ಶಾಂತಮ್ಮನ ಮನೆ ಇದ್ದು ಈಗ ನಾರಾಯಣಸ್ವಾಮಿರವರ ಮನೆ ದಕ್ಷಿಣಕ್ಕೆ ರಸ್ತೆ,ನಂತರ ಗೌವಣ್ಣರವರಿಗೆ ಸೇರಿದ ಸ್ವತ್ತು ಬರುತ್ತದೆ. ಸದರಿ ಗೌವಣ್ಣರವರಿಗೆ ಸೇರಿದ ಸ್ವತ್ತನ್ನು ಅವರು ಸುಬಾನ್ ಬೇಗ್ ಮತ್ತು ಪಾರ್ಚಜಾನ್ ಬೇಗ್ ರವರಿಗೆ ಮಾರಾಟ ಮಾಡಿರುತ್ತಾರೆ.

2. ಖಾತಾ ಸಂಖ್ಯೆ 484 ರ ಸ್ವತ್ತು ನಮ್ಮ ಗ್ರಾಮದಲ್ಲಿ ಇರುತ್ತದೆ. ಸದರ ಸ್ವತ್ತು ಅಕ್ಕಿರಾಂ ಪುರ ಗ್ರಾಮದ ಹೊಸ ಗ್ರಾಮ ಠಾಣದ ಮಧ್ಯಭಾಗದಲ್ಲಿ ಬರುತ್ತದೆ ಎಂದರೆ ಪಶ್ಚಿಮಭಾಗದಲ್ಲಿ ಬರುತ್ತದೆ. ನಿವೇಶನ ಸಂಖ್ಯೆ 483 ರಲ್ಲಿ ಮನೆ ಇದ್ದು, ಸದರಿ ಮನೆಯನ್ನು ನಾನು ನೋಡಿರುತ್ತೇನೆ. ಸದರಿ ಆಸ್ತಿಯ ವಿಸ್ತೀರ್ಣ ನನಗೆ ಗೊತ್ತಿಲ್ಲ. ನಿವೇಶನ ಸಂಃ 483 ರ ಪೂರ್ವಕ್ಕೆ ಕೊರಟಗೆರೆಯಿಂದ ಬೈರೇನಹಳ್ಳಿಗ್ರಾಮಕ್ಕೆ ಹೋಗುವ ರಸ್ತೆ, ಪಶ್ಚಿಮಕ್ಕೆ ವಾದಿರವರಿಗೆ ಸೇರಿದ ಮನೆ ಬರುತ್ತದೆ. ಸದರಿ ಮನೆಯನ್ನು ವಾದಿಯು ಸುಮಾರು 35 ವರ್ಷಗಳ ಹಿಂದೆ ಕಟ್ಟಿರುತ್ತಾರೆ. ಖಾತೆ ನಂಬರ್ 484 ರಲ್ಲಿ ವಾದಿಯು ಮನೆಯನ್ನು ಕಟ್ಟಿಕೊಂಡು ವಾಸ ಮಾಡುತ್ತಿರುತ್ತಾರೆ. ಖಾತೆ ಸಂ 483 ಮತ್ತು ದಾವಾ ಆಸ್ತಿಗೆ ಸುಮಾರು 400 ರಿಂದ 500 ಮೀಟರ್ ಅಂತರ ಇರುತ್ತದೆ.

3. 2015 ನೇ ಸಾಲಿನಲ್ಲಿ ವಾದಿ ಹೆಸರಿಗೆ ಖಾತಾ ಸಂಃ 484 ಕ್ಕೆ ಸಂಬಂಧಿಸಿದಂತೆ ಖಾತೆ ನೀಡಿರುವುದನ್ನು ನಾನು ಪ್ರಶ್ನೆ ಮಾಡಿರುತ್ತೇನೆ. ನಮಗೆ ಸೇರಿದ ಖಾತೆ ಸಂಃ 444/2 ಗೆ ಪೂರ್ಣ

ಚಕ್ಕುಬಂದಿಗೆ ಸಂಬಂಧಿಸಿದಂತೆ ವಾದಿ ಹೆಸರಿಗೆ ಪಂಚಾಯಿತಿಯವರು ಸುಳ್ಳು ಖಾತಾ ಮಾಡಿರುತ್ತಾರೆ. ಅದನ್ನು ಪ್ರಶ್ನಿಸಿ ನಾನು ಪಂಚಾಯಿತಿಯವರಿಗೆ ತಕರಾರನ್ನು ನೀಡಿದ್ದು ಅನಂತರ ವಾದಿಯು ಈ ದಾವೆಯನ್ನು ಸಲ್ಲಿಸಿರುತ್ತಾರೆ. ವಾದಿ ಹೆಸರಿಗೆ ಖಾತಾ ನೀಡಿರುವುದನ್ನು ಪ್ರಶ್ನೆಸಿ ನಾನು EO ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಅಕ್ಕಿರಾಂಪುರ ಗ್ರಾಮದಲ್ಲಿ ನಮಗೆ ಸೇರಿದ 60x40 ಅಡಿ ಜಾಗದ ಮನೆ ಮತ್ತು ನಿವೇಶನ ಇರುತ್ತದೆ. ಸದರಿ ಆಸ್ತಿಯನ್ನು ನಮ್ಮ ತಂದೆ 1979 ನೇ ಸಾಲಿನಲ್ಲಿ ನಂಜಮ್ಮ ಬಿನ್ ಲಿಂಗಪ್ಪರವರಿಂದ ಕ್ರಯಕ್ಕೆ ಪಡೆದಿರುತ್ತಾರೆ. ಆ ಸಮಯದಲ್ಲಿ ನನ್ನ ತಂದೆಯ 3 ಸಹೋದರರು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದರು. ನನ್ನ ತಂದೆಯ ಸಹೋದರರ ಭಾಗಕ್ಕೆ 11 ಗುಂಟೆ ಜಮೀನು ಅವರ ಭಾಗಕ್ಕೆ ಹೋಗಿರುತ್ತದೆ. ಸದರಿ ಆಸ್ತಿ ನನ್ನ ಅಜ್ಜಿ ನನ್ನ ಸೇರಿದ ಆಸ್ತಿ ಆಗಿದ್ದು ಅದರ ಸರ್ವೆ ನಂಬರ್ ನನಗೆ ನೆನಪಿಲ್ಲ.

**4.** ನಾವು ವಾಸ ಮಾಡುತ್ತಿರುವ ಮನೆ ಮತ್ತು ಅದಕ್ಕೆ ಹೊಂದಿಕೊಂಡಿರುವ ನಿವೇಶನದ ಚಕ್ಕುಬಂದಿ ಪೂರ್ವಕ್ಕೆ ದಾರಿ ನಂತರ ರಿಯಾಜ್ ರವರಿಗೆ ಸೇರಿದ ಮನೆ, ಪಶ್ಚಿಮಕ್ಕೆ ದಾರಿ, ಉತ್ತರಕ್ಕೆ ಗಲ್ಲಿ ನಂತರ ಶಾಂತಮ್ಮರವರಿಗೆ ಸೇರಿದ ಮನೆ, ದಕ್ಷಿಣಕ್ಕೆ ರಸ್ತೆ ನಂತರ ಗೌವಣ್ಣರವರಿಗೆ ಸೇರಿದ ಆಸ್ತಿ ಬರುತ್ತದೆ. ಸುಮಾರು 35 ವರ್ಷಗಳ ಹಿಂದೆ ನಾವು ವಾಸ ಮಾಡುತ್ತಿರುವ ಹೆಂಚಿನ ಮನೆಯನ್ನು ಪೂರ್ವ ಪಶ್ಚಿಮ 14 ಅಡಿ, ಉತ್ತರ ದಕ್ಷಿಣ 40 ಅಡಿ ಜಾಗದಲ್ಲಿ ಕಟ್ಟಿರುತ್ತಾರೆ. ಸದರಿ ಹೆಂಚಿನ ಮನೆಯ ಪೂರ್ವಕ್ಕೆ ಇರುವ ರಸ್ತೆ ಮತ್ತು ನಮ್ಮ ಮನೆಯ ನಡುವೆ 10 ಅಡಿ ಜಾಗ ಇರುತ್ತದೆ.

**5.** ಸಾಕ್ಷಿಗೆ ಒಂದು ಭಾವ ಚಿತ್ರವನ್ನು ತೋರಿಸಿ ಸದರಿ ಭಾವಚಿತ್ರದಲ್ಲಿರುವ ಹೆಂಚಿನ ಮನೆ ನಿಮಗೆ ಸೇರಿದ ಮನೆ ಎಂದು ಕೇಳಲಾಗಿ ಸಾಕ್ಷಿಯು ಭಾವಚಿತ್ರವನ್ನು ನೋಡಿ ಹೌದು ಎಂದು ನುಡಿದ ಮೇರೆಗೆ ಸದರಿ ಭಾವಚಿತ್ರವನ್ನು ನಿಪಿ-17 ಎಂದು ಗುರುತಿಸಲಾಯಿತು. ನಿಪಿ-17 ರಲ್ಲಿ ಕಾಣುತ್ತಿರುವ ಹೆಂಚಿನ ಮನೆ ಹಾಗೂ ಅದರ ಮುಂದೆ ಕಾಣುತ್ತಿರುವ ಶೌಚಾಲ್ಯವನ್ನು ಸೇರಿಸಿ ನಾವು ಮುಳ್ಳು ಬೇಲಿ ತಂತಿ ಹಾಕಿರುತ್ತೇವೆ ಎಂದರೆ ಸರಿ. ನಮ್ಮ ಮನೆಯಿಂದ ಪೂರ್ವಕ್ಕೆ ಮುಳ್ಳು ತಂತಿ ಬೇಲಿ ಮಾಡಿರುವ ಜಾಗದವರೆಗೂ 40 ಅಡಿ ಜಾಗ ಇರುತ್ತದೆ ಎಂದರೆ ಸರಿಯಲ್ಲ. ನಿಪಿ-17 ರಲ್ಲಿ ಕಾಣುತ್ತಿರುವ ನಮ್ಮ ಮನೆಯ ಉತ್ತರಕ್ಕೆ ಗಲ್ಲಿ ಅದರ ನಂತರ ಶಾಂತಮ್ಮರವರಿಗೆ ಸೇರಿದ ಜಾಗ ಬರುತ್ತದೆ.

**6.** ವಾದಿಗೆ ಸೇರಿದ ಖಾತಾ ಸಂಃ **484** ಮತ್ತು ನಮಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿ. ಖಾತಾ ನಂಬರ್ **484** ಕ್ಕೆ ವಾದಿಯೇ ಮಾಲೀಕರಾಗಿದ್ದು ಅವರೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ, ಸದರಿ ಖಾತಾ ನಂಬರ್ ನ್ನು ನಮ್ಮ ಚಕ್ಕುಬಂದಿಗೆ ಸಂಬಂಧಿಸಿದಂತೆ ನೀಡಿರುತ್ತಾರೆ. ದಾವಾ ಆಸ್ತಿಯ ಸುತ್ತಾ ಕಲ್ಲು ಕಾಂಪೌಂಡ್ ನಿರ್ಮಾಣ ಮಾಡಲಾಗಿರುತ್ತದೆ ಎಂದರೆ ಸರಿ. ನನ್ನ ತಂದೆ ನಂಜಮ್ಮರವರಿಂದ ಕಾನೇಷುಮಾರಿ ಸಂಖ್ಯೆ **3** ನ್ನು ಕ್ರಯಕ್ಕೆ ಪಡೆದಿರುತ್ತಾರೆ. ಸದರಿ ಕಾನೇಷುಮಾಡಿ ಸಂಃ **3** ಯಾವ ಖಾತಾ ನಂಬರ್ ಆಗಿರುತ್ತದೆ ಎಂಬುದರ ಬಗ್ಗೆ ನಾನು ಕಾರಿಲೇಷನ್ ದಾಖಲೆಯನ್ನು ನಾನು ನೋಡಿರುತ್ತೇನೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಪೂರ್ವಕ್ಕೆ, ಪಶ್ಚಿಮಕ್ಕೆ ಮತ್ತು ಉತ್ತರಕ್ಕೆ ಸರ್ಕಾರಿ ರಸ್ತೆ ಮತ್ತು ದಕ್ಷಿಣಕ್ಕೆ ಶಿವಣ್ಣರವರ ನಿವೇಶನ ಚಕ್ಕುಬಂದಿ ಒಳಗೆ ಬರುವ ನಿವೇಶನ ಯಾವುದು ಎಂಬುದು ನನಗೆ ಗೊತ್ತಿಲ್ಲ. ನನ್ನ ತಂದೆ ಹೆಸರಿಗೆ ನಂಜಯ್ಯರವರಿಂದ ಕ್ರಯ ಪತ್ರದಲ್ಲಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಸರ್ಕಾರಿ ಓಣಿ, ದಕ್ಷಿಣಕ್ಕೆ ಗೌವಣ್ಣನ ಸ್ವತ್ತು ಎಂದು ಬರೆದಿರುತ್ತಾರೆ. ಸದರಿ ಸ್ವತ್ತು ಅಕ್ಕಿರಾಂಪುರ ಗ್ರಾಮದ ಹೊಸ ಗ್ರಾಮ ಠಾಣದ ಪೂರ್ವ ದಿಕ್ಕಿನಲ್ಲಿ ಬರುತ್ತದೆ. ಹೊಳವನಹಳ್ಳಿ-ಅಕ್ಕಿರಾಂಪುರ ರಸ್ತೆಯ ಪಶ್ಚಿಮ ಭಾಗದಲ್ಲಿ ನನ್ನ ತಂದೆ ಕ್ರಯ ಪಡೆದಿರುವ ಆಸ್ತಿ ಬರುತ್ತದೆ ಎಂದರೆ ಸರಿಯಲ್ಲ. ಹೊಳವನಹಳ್ಳಿ-ಅಕ್ಕಿರಾಂಪುರ ರಸ್ತೆಯ ಪೂರ್ವ ಭಾಗದಲ್ಲಿ ಸಂತೆ ಸೇರುತ್ತದೆ ಎಂದರೆ ಸರಿ. ಸದರಿ ಹೊಳವನಹಳ್ಳಿ-ಅಕ್ಕಿರಾಂಪುರ ರಸ್ತೆಗೆ ಹೊಂದಿಕೊಂಡಂತೆ ಪೂರ್ವ ಭಾಗದಲ್ಲಿ ಅಕ್ಕಿರಾಂಪುರ ಗ್ರಾಮದ ಹೊಸ ಗ್ರಾಮಠಾಣಾ ಮುಕ್ತಾಯವಾಗಿರುತ್ತದೆ ಎಂದರೆ ಎಲ್ಲಿಗೆ ಮುಕ್ತಾಯವಾಗಿರುತ್ತದೆ ಎಂದು ಗೊತ್ತಿಲ್ಲ, ನಮ್ಮ ಆಸ್ತಿಯು ಅಕ್ಕಿರಾಂಪುರ ಗ್ರಾಮದ ಹೊಸ ಗ್ರಾಮಠಾಣಾದ ಪೂರ್ವ ಭಾಗದಲ್ಲಿ ಇರುತ್ತದೆ.

**7.** ಡಿ ವೆಂಕಟಸ್ವಾಮಯ್ಯ ವಾದಿಯ ತಾತ ಎಂದರೆ ಇರಬಹುದು. ಸದರಿ ಡಿ ವೆಂಕಟಸ್ವಾಮಯ್ಯ ರವರು ದಿಃ **27.05.1950** ರಲ್ಲಿ ಕಿಮ್ಮತ್ತು ಕಟ್ಟಿ ಖಾತೆ ಸಂ **374,** ಪ್ರಸ್ತುತ ಖಾತಾ ಸಂ **484** ನ್ನು ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಖಾತೆ ಸಂ **374** ಹೊಸ ಖಾತೆ ಸಂಃ**484** ಆಗಿರುವ ಬಗ್ಗೆ ದಾಖಲೆ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಹಳೇ ಖಾತೆ ಸಂ **374,** ಹೊಸ ಖಾತೆ ಸಂ **484** ರ ಪೂರ್ವ, ಪಶ್ಚಿಮ ಮತ್ತು ದಕ್ಷಿಣಕ್ಕೆ ರಸ್ತೆ, ಉತ್ತರಕ್ಕೆ ಶಾಂತಮ್ಮನ ಮನೆ

ಬರುತ್ತದೆ ಎಂದರೆ ಸರಿಯಲ್ಲ.

**8.** ಕಾನೇಷುಮಾರಿ **3** ನಂಜಮ್ಮನ ಹೆಸರಿನಲ್ಲಿ ಖಾತೆ ಇದ್ದ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಆ ರೀತಿ ನಂಜಮ್ಮರವರ ಹೆಸರಿಗೆ ಯಾವ ವರ್ಷದಿಂದ ಯಾವ ವರ್ಷದವರೆಗೂ ಖಾತೆ ಇದ್ದ ಬಗ್ಗೆ ನನ್ನ ತಂದೆಯನ್ನು ಕೇಳಬೇಕಾಗುತ್ತದೆ. ನಂಜಮ್ಮರವರ ಹೆಸರಿನಲ್ಲಿ ಕಾನೇಷುಮಾರಿ **3** ಸಂಬಂಧಿಸಿದಂತೆ ಹೊಸಗ್ರಾಮ ಠಾಣದಲ್ಲಿ ಖಾತೆ ಇರಲಿಲ್ಲ ಎಂದರೆ ಸರಿಯಲ್ಲ. ಪೂರ್ವಕ್ಕೆ ರಸ್ತೆ , ಪಶ್ಚಿಮಕ್ಕೆ ದಾರಿ, ಉತ್ತರಕ್ಕೆ ಸರ್ಕಾರಿ ಓಣಿ, ದಕ್ಷಿಣಕ್ಕೆ ಗೌವಣ್ಣರವರ ನಿವೇಶಣನದ ಚಕ್ಕುಬಂದಿಒಳಗಿನ ಆಸ್ತಿಯನ್ನು ನನ್ನ ತಂದೆ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ. ಆ ಕಾಲಕ್ಕೆ ಪ್ರತಿವಾದಿ ಮತ್ತು ಅವರ ಸಹೋದರರು ಒಟ್ಟಿಗೆ ವಸ ಮಾಡುತ್ತಿದ್ದರು ಎಂದರೆಸ ರಿಯಲ್ಲ. ನನ್ನ ತಂದೆ ನಂಜಮ್ಮರವರಿಂದ ಕಾನೇಷುಮಾರಿ **3** ನ್ನು ಕ್ರಯಕ್ಕೆ ಪಡೆದಾಗ ಸದರಿ ಸ್ವತ್ತಿನಲ್ಲಿ ಬಿದ್ದುಹೋಗಿರುವ ಹಳೇ ಮನೆ ಇತ್ತು. ಸದರಿ ಹಳೇ ಮನೆ ಪೂರ್ವ ಪಶ್ಚಿಮ **14** ಅಡಿ ಉತ್ತರ ದಕ್ಷಿಣ **40** ಅಡಿ ವಿಸ್ತೀರ್ಣ ಇತ್ತು. ಹಳೇ ಮನೆ ಜಾಗ ಹಾಗೂ ನಾವು ವಾಸ ಮಾಡುತ್ತಿರುವ ಹೆಂಚಿನ ಮನೆ ಜಾಗಕ್ಕೂ ಸುಮಾರು **200** ಮೀಟರ್ ಅಂತರ ಇರುತ್ತದೆ ಎಂದರೆ ಸರಿಯಲ್ಲ, ಅದೇ ಜಾಗದಲ್ಲಿ ನಮ್ಮ ಹೆಂಚಿನ ಮನೆ ಇರುತ್ತದೆ. ಮೇಲೆ ಹೇಳಿದ ಚಕ್ಕುಬಂದಿ ಒಳಗೆ ನನ್ನ ತಂದೆ ಕ್ರಯಕ್ಕೆ ಪಡೆದ ಆಸ್ತಿ ಬರುವುದಿಲ್ಲ ಎಂದರೆ ಸರಿಯಲ್ಲ.

**9.** ನಮ್ಮ ತಂದೆ ಕ್ರಯಕ್ಕೆ ಪಡೆದ ಕಾನೇಷುಮಾರಿ **3** ರ ದಕ್ಷಿಣಕ್ಕೆ ಇದ್ದ ಗೌವಣ್ಣರವರ ಜಾಗ ಈಗ ರಸ್ತೆ ಮಾಡಿದ್ದು ನಂತರ ಗೌವಣ್ಣರವರಿಗೆ ಸೇರಿದ ಸ್ವಲ್ಪ ಜಾಗ ಇರುತ್ತದೆ. ನನ್ನ ತಂದೆ ಕ್ರಯಕ್ಕೆ ಪಡೆದ ಹಳೇ ಮನೆ ಹೊಸ ಗ್ರಾಮ ಠಾಣಾದ ಪೂರ್ವ ಭಾಗದಲ್ಲಿ ಬರುತ್ತದೆ ಎಂದರೆ ಸರಿ. ಸದರಿ ಹಳೇ ಮನೆ ಜಾಗಕ್ಕೂ ಹಾಗೂ ಖಾತೆ ಸಂ **484** ಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿ. ಖಾತಾ ಸಂ **484** ಹೊಸ ಗ್ರಾಮ ಠಾಣದ ಮಧ್ಯ ಭಾಗದಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ನಾವು ವಾಸ ಮಾಡುತ್ತಿರುವ ಹೆಂಚಿನ ಮನೆ ಹೊಸಗ್ರಾಮ ಠಾಣದ ಮಧ್ಯಭಾಗದಲ್ಲಿ ಬರುತ್ತದೆ ಎಂದರೆ ಸರಿಯಲ್ಲ, ಪೂರ್ವ ಭಾಗದಲ್ಲಿ ಬರುತ್ತದೆ. ನಾವು ಈಗ ವಾಸ ಮಾಡುತ್ತಿರುವ ಹೆಂಚಿನ ಮನೆ ಕಾನೇಷುಮಾರಿ **3** ಆಗಿದ್ದು ಈಗ ಗ್ರಾಮ ಪಂಚಾಯಿತಿಯವರು ಮನೆ ಮತ್ತು ಮನೆ ಅಂಗಳಕ್ಕೆ ಖಾತಾ ಸಂ **444/1** ನ್ನು ನೀಡಿರುತ್ತಾರೆ. ಸದರಿ **444/1** ಕ್ಕೆ ಪಂಚಾಯಿತಿಯವರು ಅದೇ

ಖಾತೆ ಸಂ **444** ನೀಡಿರುತ್ತಾರೆ. ಆ ರೀತಿ ಖಾತೆ ಸಂಖ್ಯೆ ಬದಲಾವಣೆ ಮಾಡಿದ ಎಂ ಆರ್ ಸಂಖ್ಯೆ ನನಗೆ ಗೊತ್ತಿಲ್ಲ, ಕ್ರಯಪತ್ರದ ಆಧಾರದ ಮೇಲೆ ಪಂಚಾಯಿತಿಯವರು ಆ ರೀತಿ ನೀಡಿರುತ್ತಾರೆ. ಪಂಚಾಯಿತಿ ಸದಸ್ಯರು ನಡುವಳಿಕೆ ಮಾಡಿ ಖಾತೆ ಸಂ **444** ನ್ನು ಖಾತಾ ಸಂಃ **444/1** ಎಂದು ಬದಲಾವಣೆ ಮಾಡಿರುತ್ತಾರೆ. ಆ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಆ ರೀತಿ ನಡುವಳಿಕೆಯನ್ನು **2010** ನೇ ಸಾಲಿನಲ್ಲಿ ಮಾಡಿರುತ್ತಾರೆ.

**10.** ಅಕ್ಕಿರಾಂಪುರ ಗ್ರಾಮದ ಹೊಸಗ್ರಾಮ ಠಾಣಾದಲ್ಲಿರುವ ಖಾತಾ ಸಂಖ್ಯೆ **428/1** ನನ್ನ ಚಿಕ್ಕಪ್ಪನಾದ ಸಿದ್ದಮಲ್ಲಯ್ಯರವರಿಗೆ ಸೇರಿದ್ದಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಿದ್ದಗಂಗಯ್ಯರವರಿಗೆ ಸೇರಿದ ಖಾತೆ ಸಂಃ **429** ಮತ್ತು ಖಾತೆ ಸಂ **430** ಮುದ್ದಯ್ಯರವರಿಗೆ ಸೇರಿದ ಆಸ್ತಿಗಳು ಆಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಹೊಸಬಡಾವಣೆಯ ದಕ್ಷಿಣಕ್ಕೆ ಅಕ್ಕಿರಾಂಪುರ ಗ್ರಾಮದ ಸರ್ವೆ ನಂ **9/1** ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ **3** ಜನ ಸಹೋದರರು **60** ಇಂಟು **40** ಅಡಿ ವಿಸ್ತೀರ್ಣದಲ್ಲಿ ತಲಾ ಒಂದೊಂದು ನಿವೇಶನವನ್ನು ಅಕ್ಕಿರಾಂಪುರ ಗ್ರಾಮದ ಹೊಸ ಬಡಾವಣೆಯ ಪೂರ್ವ ಭಾಗದಲ್ಲಿ ಇರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಖಾತೆ ನಂಬರ್ **483** ವಿಸ್ತೀರ್ಣ **60** ಇಂಟ **40** ಅಡಿ ಆಶಾರವರಿಗೆ ಸೇರಿದಂತಹ ಆಸ್ತಿ ಎಂದರೆ ಸರಿ. ಸದರಿ ಆಸ್ತಿಯ ಪೂರ್ವಕ್ಕೆ ಅಕ್ಕಿರಾಂಪುರ-ಕೊರಟಗೆರೆ ರಸ್ತೆ, ಪಶ್ಚಿಮಕ್ಕೆ ದಾರಿ, ಉತ್ತರಕ್ಕೆ ಲೇಟ್ ಅಮೀರ್ ಜಾನ್ ರವರ ಮನೆ, ದಕ್ಷಿಣಕ್ಕೆ ದಾರಿ ಬರುತ್ತದೆ ಎಂದರೆ ಸರಿಯಲ್ಲ. ಸದರಿ ಖಾತೆ ನಂಬರ್ ನಲ್ಲಿ ಆಶಾ ರವರು ಸುಮಾರು **60** ವರ್ಷಗಳ ಹಿಂದಿನಿಂದಲೂ ಮನೆಯನ್ನು ಕಟ್ಟಿಕೊಂಡು ವಾಸ ಮಾಡುತ್ತಿರುತ್ತಾರೆಂದರೆ ಸರಿಯಲ್ಲ, ಸುಮಾರು **3-4** ವರ್ಷಗಳ ಹಿಂದೆ ಕಟ್ಟಿರುತ್ತಾರೆ. ಅದಕ್ಕೂ ಮೊದಲು ಸದರಿ ಖಾತೆ ನಂಬರ್ ವಾದಿ ಮತ್ತು ಲಕ್ಷ್ಮೀಕಾಂತ್ ರವರ ಹೆಸರಿನಲ್ಲಿ ಜಂಟಿ ಖಾತೆ ಇತ್ತು. ಖಾತೆ ನಂ **483** ರ ಹಳೇ ಎಷ್ಟಿತ್ತು ಎಂದು ನನಗೆ ಗೊತ್ತಿಲ್ಲ. ಖಾತೆ ನಂ **483** ಆಶಾರವರಿಗೆ ಹೇಗೆ ಬಂತ್ತು ಎಂಬುದು ನನಗೆ ಗೊತ್ತಿಲ್ಲ. ನಮ್ಮ ಮನೆ ಮತ್ತು ಶೌಚಾಲಯದ ದಕ್ಷಿಣಕ್ಕೆ ಸಾಲಮ್ಮ, ಗುಂಡಮ್ಮ, ಚಿನ್ನಕದರಪ್ಪರವರ ಮಗ ವಸಂತಪ್ಪರವರಿಗೆ ಸೇರಿದ ಮನೆಗಳು ಇವೆ ಎಂದರೆ ಸರಿಯಲ್ಲ, ಗೌವಣ್ಣರವರಿಗೆ ಸೇರಿದ ಸ್ವತ್ತು ಇದ್ದು ಈಗ ಸುಬಾನ್ ಬೇಗ್ ರವರು ಸದರಿ ಸ್ವತ್ತನ್ನು ಕ್ರಯಕ್ಕೆ ಪಡೆದಿರುತ್ತಾರೆ. ಸದರಿ ಸುಬಾನ್ ಸಾಬ್ ರವರು ಸುಮಾರು **35** ವರ್ಷಗಳ ಹಿಂದೆ ಗೌವಣ್ಣರವರಿಂದ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ.

**11.** ನಮ್ಮ ಮನೆಯ ಆಗ್ನೇಯ ದಿಕ್ಕಿಗೆ ಸುಮಾರು **600** ಮೀಟರ್ ದೂರದಲ್ಲಿ ಸಾಲಮ್ಮ, ಗುಂಡಮ್ಮ ಮತ್ತು ವಸಂತ್ ರವರಿಗೆ ಸೇರಿದ ಮನೆಗಳು ಇರುತ್ತವೆ. ದಾವಾ ಆಸ್ತಿಯ ದಕ್ಷಿಣಕ್ಕೆ ಬರುವ ರಸ್ತೆಯ ಸುಬಾನ್ ಸಾಬ್ , ಪಾರ್ಷಾ ಜಾನ್ ಮತ್ತು ಎ ಆರ್ ಸಿದ್ದಪ್ಪ ಬಿನ್ ಅಕ್ಕಣ್ಣರವರಿಗೆ ಸೇರಿದ ಮನೆಗಳು ಬರುತ್ತವೆ ಎಂದರೆ ಸರಿ, ಸದರಿ ಮನೆಗಳು ಗೌವಣ್ಣರವರಿಗೆ ಸೇರಿದ ಆಸ್ತಿಯಲ್ಲಿ ಬರುವ ಮನೆಗಳು ಆಗಿರುತ್ತವೆ. ಆ ರೀತಿ ಆ ಮನೆಗಳನ್ನು ಸುಮಾರು **35** ವರ್ಷಗಳ ಹಿಂದೆ ಕಟ್ಟಿರುತ್ತಾರೆ. ದಾವಾ ಆಸ್ತಿಯ ಉತ್ತರಕ್ಕೆ ದಾವಾ ಆಸ್ತಿಯ ಉತ್ತರಕ್ಕೆ ಶಾತಮ್ಮನ ಮನೆ ಅದರ ಉತ್ತರಕ್ಕೆ ಪುಷ್ಪಲತಾರವರ ಮನೆ ಅದರ ಉತ್ತರಕ್ಕೆ ದೊಡ್ಡಯ್ಯರವರ ಮನೆ ಅದರ ಉತ್ತರಕ್ಕೆ ಬಾಬುಸಾಬ್ ರವರಿಗೆ ಸೇರಿದ ಮನೆಗಳು ಬರುತ್ತವೆ ಎಂದರೆ ಸರಿ, ಹಿಂದೆ ಮುಂದೆ ಇರುತ್ತವೆ. ಸದರಿ ಮನೆಗಳ ವಿಸ್ತೀರ್ಣ **30** ಇಂಟು **40** ಇವೆ ಎಂದರೆ ಸರಿಯಲ್ಲ, ಒಂದು ಮನೆ **60** ಇಂಟು **40** ಇರುತ್ತದೆ, ಇನ್ನು ಕೆಲವು ಮನೆಗಳು ಬೇರೆ ಬೇರೆ ವಿಸ್ತೀರ್ಣದಲ್ಲಿ ಇರುತ್ತವೆ. ಶಾಂತಮ್ಮರವರ ಮನೆಯ ಪೂರ್ವಕ್ಕೆ ರಸ್ತೆ ಬರುತ್ತದೆ ಎಂದರೆ ಸರಿಯಲ್ಲ, ಪಂಚಾಯ್ತಿ ಜಾಗ ಬರುತ್ತದೆ, ಅದರ ಪೂರ್ವಕ್ಕೆ ರಸ್ತೆ ಬರುತ್ತದೆ. ಸದರಿ ರಸ್ತೆಯ ಪೂರ್ವಕ್ಕೆ ಮುಸ್ಲಿಂರವರಿಗೆ ಸೇರಿದ ಜಾಗ ಬರುತ್ತದೆ. ರಾಧಮ್ಮರವರಿಗೆ ಸೇರಿದ ನಿವೇಶನದ ದಕ್ಷಿಣಕ್ಕೆ ನಮಗೆ ಸೇರಿದ ಹೆಂಚಿನ ಮನೆ ಬರುತ್ತದೆ ಎಂದರೆ ಸರಿಯಲ್ಲ.

**12.** ನಮ್ಮ ಮನೆ ಮತ್ತು ಖಾಲಿ ಜಾಗ ಹಾಗೂ ಖಾತಾ ಸಂಃ **484** ಕ್ಕೆ ಸಂಬಂಧಿಸಿದಂತೆ ವಿವಾದ ಉಂಟಾದಾಗ ಕೊರಟಗೆರೆ ಇ ಒ ರವರು ಸ್ಥಳ ಪರಿಶೀಲನೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ತಂದೆ ಸ್ಥಳದಲ್ಲಿದ್ದು ಮಹಜರ್ ಗೆ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಇ ಒ ಸ್ಥಳ ಪರಿಶೀಲನೆ ಮಾಡಿದಾಗ ನಮ್ಮ ಮನೆ ಮತ್ತು ಖಾಲಿ ಜಾಗದ ವಿಸ್ತೀರ್ಣ **150** ಅಡಿ ಇರುತ್ತದೆ ಎಂದು ಕಂಡುಬಂದಿರುತ್ತದೆ ಎಂದರೆ ಸರಿಯಲ್ಲ, **60** ಇಂಟು **40** ಅಡಿ ಜಾಗ ಇರುತ್ತದೆ. ನನ್ನ ತಂದೆ **2010** ನೇ ಸಾಲಿನಲ್ಲಿ ಹೆಂಚಿನ ಮನೆ ಕಟ್ಟುವ ಸಲುವಾಗ ಖಾತಾ ಸಂಃ **444** ಕ್ಕೆ ಸಂಬಂಧಿಸಿದಂತೆ ಪರವಾನಿಗೆಯನ್ನು ಪಡೆದಿರುತ್ತಾರೆ ಎಂದರೆ ಸರಿ. ದಿಃ **16.11.2015** ರಂದು ಪಂಚಾಯ್ತಿರವರು ನಂಜಮ್ಮನ ಹೆರಿನಲ್ಲಿ ಕಾನೇಷುಮಾರಿ **3** ಕ್ಕೆ ಸಂಬಂಧಿಸಿದಂತೆ ಪಂಚಾಯ್ತಿಯಲ್ಲಿ ದಾಖಲೆ ಇರುವುದಿಲ್ಲ ಎಂದು ಹಿಂಬರಹ ನೀಡಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಉತ್ತರಕ್ಕೆ ಶಾಂತಮ್ಮರವರ ಮನೆಯನ್ನು ನಾರಾಯಣ ಸ್ವಾಮಿರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಶಾಂತಮ್ಮರವರು ನಾರಾಯಣಸ್ವಾಮಿರವರಿಗೆ ಬರೆದುಕೊಟ್ಟ ಕ್ರಯಪತ್ರದಲ್ಲಿ ಷೆಡ್ಯೂಲ್ ಆಸ್ತಿಯ ದಕ್ಷಿಣಕ್ಕೆ ವಾದಿಗೆ ಸೇರಿದ ನಿವೇಶನ ಎಂದು ಬರೆದಿರುತ್ತಾರೆ ಎಂದರೆ ಸರಿಯಲ್ಲ. ರಾಧಮ್ಮರವರು ಅವರಿಗೆ ಸೇರಿದ ನಿವೇಶನವನ್ನು ನೂರ್ ಜಾನ್ ರವರಿಗೆ ಮಾರಾಟ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯ ಪತ್ರದಲ್ಲಿನ ಆಸ್ತಿಯ ದಕ್ಷಿಣಕ್ಕೆ ನಮಗೆ ಸೇರಿದ ನಿವೇಶನ ಬರುತ್ತದೆ ಎಂದು ಬರೆದಿರುತ್ತಾರೆ ಎಂದರೆ ಸರಿಯಲ್ಲ.

**13.** ಅಕ್ಕಿರಾಂ ಪುರದ ಹೊಸಗ್ರಾಮ ಠಾಣದ ಪಶ್ಚಿಮಕ್ಕೆ ಅಮೀರ್ ಜಾನ್ ಗೆ ಸೇರಿದ ನಿವೇಶನ ಸಂ **3** ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಅನುಬಂಧ **1** ನ್ನು ನಾನು ನೋಡಿದ್ದೇನೆ. ಸದರಿ ದಾಖಲೆ ಪ್ರಕಾರ ದಾವಾ ಆಸ್ತಿ ವಾದಿಗೆ ಸೇರಿದ್ದಾಗಿರುತ್ತದೆ ಎಂದರೆ ಸರಿಯಲ್ಲ. ವಾದಿಯು ದಿಃ **04.03.2010** ರಂದು ದಾವಾ ಆಸ್ತಿಯಲ್ಲಿ ಮನೆ ಕಟ್ಟಲು ಗ್ರಾಮ ಪಂಚಾಯಿತಿಯಿಂದ ಪರವಾನಿಗೆಯನ್ನು ಪಡೆದಿರುತ್ತಾರೆ ಎಂದರೆ, ವಾದಿಯ ಅಣ್ಣ ಗ್ರಾಮಪಂಚಾಯಿತಿ ಸದಸ್ಯರಾಗಿದ್ದಾಗ ಆ ರೀತಿ ದಾಖಲೆಯನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ. ವಾದಿಯ ಅಣ್ಣ ಲಕ್ಷ್ಮೀಕಾಂತ್ ರವರು **2** ಬಾರಿ **2005** ರಿಂದ **2015** ನೇ ಸಾಲಿನವರೆಗೂ ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದರು. **2005** ರಿಂದ **2015** ರವರೆಗೆ ನಮ್ಮ ಸಂಬಂಧಿಕರಾದ ವಿಜಯಲಕ್ಷ್ಮೀರವರು ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಮತ್ತು ನನ್ನ ತಂದೆ ಸೇರಿಕೊಂಡು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

**14.** ಪ್ರತಿವಾದಿ ಹೆಸರಿನಲ್ಲಿರುವ ಖಾತೆ ಆನ್ ಲೈನ್ ನಲ್ಲಿ ಯಾವ ಖಾತೆ ಸಂಖ್ಯೆ ಇರುತ್ತದೆ ಎಂಬುದರ ಬಗ್ಗೆ ನಾನು ಪರಿಶೀಲನೆ ಮಾಡಿರುವುದಿಲ್ಲ. ಪ್ರತಿವಾದಿ ಹೆಸರಿನಲ್ಲಿ **444/1** ಎಂದು ಖಾತೆ ಬರುತ್ತಿರುತ್ತದೆ ಎಂದರೆ, ನಾನು ಪರಿಶೀಲನೆ ಮಾಡಿರುವುದಿಲ್ಲ. ನಾನು ಆನ್ ಲೈನ್ ನಲ್ಲಿ ಕಂದಾಯ ಪಾವತಿ ಮಾಡುತ್ತಿರುತ್ತೇನೆ. ಸಾಕ್ಷಿಗೆ ಭಾವಚಿತ್ರವನ್ನು ತೋರಿಸಿ ಸದರಿ ಭಾವಚಿತ್ರದಲ್ಲಿ ಕಾಣುತ್ತಿರುವ ಆಸ್ತಿ ದಾವಾ ಆಸ್ತಿ ಆಗಿರುತ್ತದೆ ಎಂದು ಕೇಳಲಾಗಿ, ಸಾಕ್ಷಿಯು ಭಾವಚಿತ್ರವನ್ನು ನೋಡಿ ಹೌದು ಎಂದು ಒಪ್ಪಿದ್ದರ ಮೇರೆಗೆ ಸದರಿ ಭಾವಚಿತ್ರವನ್ನು ನಿಪಿ-**18** ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಿ, ಸದರಿ ಭಾವಚಿತ್ರದಲ್ಲಿ ಕಾಣುತ್ತಿರುವ ಪಾಯವನ್ನು ಈ ದಾವೆ ಚಾಲ್ತಿಯಲ್ಲಿರುವಾಗಲೇ ಹಾಕಿರುವಂತಹ ಪಾಯ ಆಗಿರುತ್ತದೆಯೆ ಎಂದು ಕೇಳಲಾಗಿ ಸಾಕ್ಷಿಯು ಭಾವಚಿತ್ರವನ್ನು ನೋಡಿ ಒಪ್ಪಿದ್ದರ ಮೇರೆಗೆ ಅದನ್ನು ನಿಪಿ-**19** ಎಂದು ಗುರುತಿಸಲಾಯಿತು.

**15.** ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಿ, ಸದರಿ ಭಾವಚಿತ್ರದಲ್ಲಿ ಕಾಣುತ್ತಿರುವ ಅಂಗಡಿ ಮಳಿಗೆ ಇರುವ ಕಟ್ಟಡ ನನ್ನ ಚಿಕ್ಕಪ್ಪನಿಗೆ ಸೇರಿದ್ದ ಎಂದು ಕೇಳಲಾಗಿ ಸಾಕ್ಷಿಯು ಭಾವಚಿತ್ರವನ್ನು ನೋಡಿ ಒಪ್ಪಿದ್ದರ ಮೇರೆಗೆ ಅದನ್ನು ನಿಪಿ-**20** ಎಂದು ಗುರುತಿಸಲಾಯಿತು. ನಿಪಿ-**20** ರಲ್ಲಿ ಕಾಣುತ್ತಿರುವ ನನ್ನ ಚಿಕ್ಕಪ್ಪನ ಕಟ್ಟಡ ಅಕ್ಕಿರಾಂ ಪುರ ಹೊಸ ಬಡಾವಣೆಯ ಪೂರ್ವ ಭಾಗದಲ್ಲಿರುವ ಮನೆ ಎಂದರೆ ಸರಿಯಲ್ಲ. ನಿಪಿ-**20** ರಲ್ಲಿ ಕಾಣುತ್ತಿರುವ ರಸ್ತೆಯು ಅಕ್ಕಿರಾಂಪುರ ಹೊಸ ಬಡಾವಣೆಯ ಪೂರ್ವಕ್ಕೆ ಹಾದು ಹೋಗುವಂತಹ ಎಂದರೆ ಸರಿಯಲ್ಲ, ಸದರಿ ರಸ್ತೆಯು ಹೊಳವನಹಳ್ಳಿಯಿಂದ ಅಕ್ಕಿರಾಂಪುರಕ್ಕೆ ಹಾದು ಹೋಗುತ್ತದೆ. ನಿಪಿ-**20** ರಲ್ಲಿ ಕಾಣುತ್ತಿರುವ ನಮ್ಮ ಚಿಕ್ಕಪ್ಪನ ಕಟ್ಟಡವು ಸರ್ವೆ ನಂಬರ್ ಜಾಗದಲ್ಲಿ ಬರುತ್ತದೆ. ಅಕ್ಕಿರಾಂಪುರ ಗ್ರಾಮದ ಹೊಸಬಡಾವಣೆ ಸರ್ವೆ ನಂ ಜಾಗದಲ್ಲಿ ಆಗಿರುತ್ತದೆ ಎಂದರೆ ಗೊತ್ತಿಲ್ಲ. ನಮ್ಮ ಚಿಕ್ಕಪ್ಪನ ಕಟ್ಟಡ ದಕ್ಷಿಣಕ್ಕೆ ನೇರವಾಗಿ ಸರ್ವೆ ನಂ **9/1** ರ ಜಮೀನು ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂ **9/1** ರಲ್ಲಿ ಗೌವಣ್ಣರವರಿಗೆ ಸೇರಿದ ಮನೆ ಬರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ **9/1** ನನ್ನ ಚಿಕ್ಕಪ್ಪ ಮತ್ತು ದೊಡ್ಡಪ್ಪರವರ ಹೆಸರನಲ್ಲಿ ಇರುತ್ತದೆ. ನಿಪಿ-**20** ರಲ್ಲಿ ಅಂಗಡಿ ಮಳಿಗೆ ಇರುವ ಕಟ್ಟಡದ ನನ್ನ ಚಿಕ್ಕಪ್ಪನ ಜಾಗವೇ ನಂಜಮ್ಮರವರಿಂದ ನನ್ನ ತಂದೆ ಕ್ರಯಕ್ಕೆ ಪಡೆದಂತಹ ಜಾಗ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಜಾಗದ ದಕ್ಷಿಣಕ್ಕೆ ಗೌವಣ್ಣರವರಿಗೆ ಸೇರಿದ ಸರ್ವೆ ನಂ **9/1** ಬರುತ್ತದೆ ಎಂದರೆ ಸರಿಯಲ್ಲ.

**16.** ನನ್ನ ಚಿಕ್ಕಪ್ಪಂದಿರು ಕಟ್ಟಿರುವ ಮನೆಯ ಜಾಗದ ಸರ್ವೆ ನಂಬರ್ ನನಗೆ ಹೇಳಲಾಗುವುದಿಲ್ಲ. **2011** ನೇ ಸಾಲಿನಲ್ಲಿ ದಾವಾ ಆಸ್ತಿಯಲ್ಲಿ ಪಾಯ ಹಾಕಲು ಪರವಾನಿಗೆಯನ್ನು ಪಡೆದಿರುತ್ತೇವೆ. ಮನೆ ಕಟ್ಟಲು ಪರವಾನಿಗೆ ಪಡೆದು ಅದು **6** ತಿಂಗಳ ಅವಧಿಗೆ ಮಾತ್ರ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ದಾವಾ ಆಸ್ತಿಗೂ ನಮಗೂ ಯಾವುದೇ ಸಂಬಂಧ

ಇರುವುದಿಲ್ಲ ಹಾಗೂ ದಾವಾ ಆಸ್ತಿಯಲ್ಲಿ ನಾವು ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯು ದಾವಾ ಆಸ್ತಿಯ ಉತ್ತರದಲ್ಲಿರುವ ನಾರಾಯಣಸ್ವಾಮಿರವರ ಮನೆಯಲ್ಲಿ ಈಗ ವಾಸ ಮಾಡುತ್ತಿರುತ್ತಾರೆ ಎಂದರೆ ಸರಿಯಲ್ಲ. ಖಾತಾ ಸಂ **444/1** ಕ್ಕೆ ಸಂಬಂದಿಸಿದಂತೆ ಮಾತ್ರ ನಮಗೆ ಹಕ್ಕು ಇದ್ದು ಬೇರೆ ಯಾವುದೇ ಆಸ್ತಿಯಲ್ಲಿ ನಮಗೆ ಹಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಖಾತಾ ಸಂ **444/1** ಮತ್ತು **444/2** ಪೂರ್ವ ಪಶ್ಚಿಮ **60** ಅಡಿ, ಉತ್ತರ ದಕ್ಷಿಣ **40** ಅಡಿ ಜಾಗ ನಮಗೆ ಸೇರಿದ್ದಾಗಿರುತ್ತದೆ. ದಾವಾ ಆಸ್ತಿಯ ಪೂರ್ವಕ್ಕೆ ಹೆಂಚಿನ ಮನೆ ಸೇರಿ **60** ಇಂಟು **40** ಅಡಿ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪೂರ್ವಕ್ಕೆ **10** ಅಡಿ ರಸ್ತೆ ಇದ್ದು ಅದರ ನಂತರ ನಮ್ಮ ಹೆಂಚಿನ ಮನೆ ಇದ್ದು ಅದರ ನಂತರ ನಮಗೆ ಸೇರಿದ ಖಾಲಿ ನಿವೇಶನ ಬರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇರುತ್ತದೆ.**

**ಸಿ.ಜೆ. ಮತ್ತು ಪ್ರ.ದ.ನ್ಯಾದಂ.**
**ಕೊರಟಗೆರೆ**

ಓ.ಎಸ್. ನಂ. 171 /2015
ಡಿಡಬ್ಲ್ಯೂ-1

Plaintiff present, filed his affidavit in lieu of chief examination and examined as PW-1 got marked Ex.P. 1 to 7.

Sri. GMK prays time.

Further chief of PW 1 by: 29-01-2026

Civil Judge and JMFC.
*Koratagere.*